MYSORE LEGISLATIVE ASSEMBLY

TWENTIETH DAY.

Monday, 22nd July 1957.

The House met in the Assembly Hall, Vidhana Soudha at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Construction of Three Bridges near Kannolli, Sindgi.

Q.—86. **Sri SANKAR GOWDA Y. PATIL** (Sindgi).—

Will the Government be pleased to state :—

(*a*) whether they are aware of the inconvenience caused to the public for three months during rainy season while crossing three nalas near Kannolli, Sindgi Taluk, Bijapur District ;

(*b*) whether they are aware of the necessity of constructing bridges over these nalas ?

A.—**Sri H. K. VEERANNA GOWDH** (Minister for Public Works).—

(*a*) Yes ; inconvenience is caused sometimes.

(*b*) Yes.

ಶ್ರೀ ಶಂಕರಗೌಡ ವೈ. ಪಾಟೀಲ್.—(ಬಿ) ಪ್ರಶ್ನೆಗೆ ಸರ್ಕಾರದವರು "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಆ ಮೂರು ಸೇತುವೆಗಳ ಪೈಕಿ ಈಗಾಗಲೇ ಒಂದು ಸೇತುವೆಯ ಕೆಲಸ ಪೂರೈಸಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದು ಸೇತುವೆ ಆಗಲೇ ಪೂರೈಸಿದೆ ಎಂದು ಹೇಳುತ್ತೀರಾ ?

ಶ್ರೀ ಶಂಕರಗೌಡ ವೈ. ಪಾಟೀಲ್.—ಹೌದು. ಇನ್ನೆರಡು ಸೇತುವೆಗಳ ಅಂದಾಜು ಸ್ವಲ್ಪವೇ ಆಗುತ್ತದೆ. ಆದ್ದರಿಂದ ಆ ಎರಡು ಸೇತುವೆಗಳನ್ನೂ ಕಟ್ಟಲು ಬೇಗ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾವು ಹೇಳುತ್ತಿರುವ ಅಭಿಪ್ರಾಯಕ್ಕೂ ಇಲ್ಲಿ ನಮೂದಿಸಿರ ತಕ್ಕ ಉತ್ತರಕ್ಕೂ ಏನೋ ಸ್ವಲ್ಪ ವ್ಯತ್ಯಾಸ ಬಂದ ಹಾಗೆ ಕಾಣುತ್ತದೆ. ಇಲ್ಲಿ—The work has been taken up ಎಂದು ಮಾತ್ರ ತಿಳಿಸಿದೆ. ಈ ಅಂದಾಜು ನಮಗೆ ತಾರೀಖು 8—5—57 ರಲ್ಲಿ ಬಂತು. ಇದನ್ನು ತಾರೀಖು 21—5—57 ರಲ್ಲಿ ಅಂಗೀಕಾರ ಮಾಡಿ ಫೈಲನ್ನು ವಾಪಸ್ಸು ಕಳುಹಿಸಿ ಕೊಡಲಾಯಿತು. ಆದರೆ ಈ ವೇಳೆಗೇನಾದರೂ ಕೆಲಸ ಮುಗಿದಿದೆಯೋ ಏನೋ. . . . .

ಶ್ರೀ ಶಂಕರಗೌಡ ವೈ. ಪಾಟೀಲ್.—ಇನ್ನೇನು ಮುಗಿಯಲಿಕ್ಕೆ ಬಂದಿದೆ. ಆದರೆ ಈ ಒಂದು ಸೇತುವೆಯಿಂದೇನೂ ಅನುಕೂಲವಾಗಲಿಕ್ಕಿಲ್ಲ. ಆದ್ದರಿಂದ ಆ ಉಳಿದೆರಡು ಸೇತುವೆಗಳನ್ನೂ ಬೇಗ ಪೂರೈಸಿದರೆ ಮಾತ್ರ ಅನುಕೂಲವಾಗುತ್ತದೆ. ಈ ವರ್ಷದಲ್ಲೇ ಅವುಗಳನ್ನೂ ಬೇಗ ಪೂರೈಸುವಿರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಿಜ. ತಾವು ಹೇಳಿದಂತೆ ಮೂರು ಸೇತುವೆಗಳನ್ನೂ ಕಟ್ಟಿದರೇ ಅನುಕೂಲ. ಅದನ್ನು ಆಲೋಚನೆ ಮಾಡಲಾಗುತ್ತದೆ.

Construction of Bridges at Yankanchi and Goalgiri, Sindgi Taluk.

Q.—88. **Sri SANKAR GOWDA Y. PATIL** (Sindgi).—

Will the Government be pleased to state :—

(*a*) whether they are aware that two nalas near Yankanchi and one nala near Goalgiri, Sindgi Taluk, Bijapur District, overflow during rainy season causing great inconvenience to the people to cross over ;

(*b*) whether they are also aware of heavy traffic on the Bijapur-Gulbarga Main Road, that crosses the said nalas ;

(*c*) whether they would consider the feasibility of constructing a bridge to avoid inconvenience to the public and also to improve commercial transport ?

A.—**Sri H. K. VEERANNA GOWDH** (Minister for Public Works).—

(*a*) Yes.

(*b*) No.

(*c*) Will be examined.

---

* Asterisk indicates that the remarks or speeches have not been revised by the Member concerned.

ಶ್ರೀ ಶಂಕರಗೌಡ ಪೈ. ಪಾಟೀಲ್.—ಸರ್ಕಾರದವರು (ಬಿ) ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಈ ಗುಲ್ಬರ್ಗ-ಬಿಜಾಪುರ ರಸ್ತೆ ಕೋಟ್ಯಂತರ ರೂಪಾಯಿಗಳ ಮಾಲನ್ನು ಸಾಗಿಸ ತಕ್ಕಂದ ರಸ್ತೆ ಹೌದೋ-ಅಲ್ಲವೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಬಗ್ಗೆ ರಿಪೋರ್ಟ್ ತರಿಸಿ ನೋಡಬೇಕು.

ಶ್ರೀ ಶಂಕರಗೌಡ ಪೈ. ಪಾಟೀಲ್.—ಆ ರಸ್ತೆಯ ಪಕ್ಕದಲ್ಲೇ ಒಂದು ದೊಡ್ಡ ಜಾತ್ರೆ ನಡೆಯುತ್ತದೆ. ಅದಕ್ಕೆ ಲಕ್ಷಾಂತರ ಜನರು ಬಂದು ಹೋಗುತ್ತಿದ್ದಾರೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

Expenditure incurred by P.W.D. on Channagiri-Davangere Road.

Q.—315. Sri K. RUDRAPPA (Channagiri).—

Will the Government be pleased to state:—

(*a*) the year in which the Channagiri, Devanahalli, Santebennur and Davangere road was taken over by the P.W.D.;

(*b*) the expenditure incurred by P.W.D. on this road after it was taken over by it;

(*c*) the places at which bridges and high-level causeways are required to be constructed on that road and the estimated expenditure thereon?

A.—Sri H. K. VEERANNA GOWDH (Minister for Public Works).—

(*a*) 1953.

(*b*) Rs. 70,000.

Estimated cost

(*c*) (i) Bridge across Hirehalla Rs. 1,01,000.

(ii) Bridge across Soppinahalla (Tubrehalla) Rs. 40,000.

ಶ್ರೀ ಕೆ. ರುದ್ರಪ್ಪ.—ಈಗ ಸರ್ಕಾರದವರು ಈ (ಬಿ) ಪ್ರಶ್ನೆಗೆ ಉತ್ತರವಾಗಿ 70,000 ರೂಪಾಯಿಗಳೆಂದು ತಿಳಿಸಿರುವುದು ಆ ದಾವಣಗೆರೆ—ಚನ್ನಗಿರಿ ರಸ್ತೆಗೆ ತಾನೇ?

ಅಧ್ಯಕ್ಷರು.—ಹೌದು.

ಶ್ರೀ ಕೆ. ರುದ್ರಪ್ಪ.—ಈಗ ನಾನು ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆಂದರೆ ಸರ್ಕಾರದವರು ಈ ರಸ್ತೆಯಲ್ಲಿ ಮೂರು ದೊಡ್ಡ ಸೇತುವೆಗಳಿದ್ದರೂ ಕೇವಲ ಎರಡು ಸೇತುವೆಗಳ ಹೆಸರನ್ನು ಮತ್ತು ಅವುಗಳಿಗಾಗುವ ಖರ್ಚನ್ನು ಮಾತ್ರವೇ ತಿಳಿಸಿರುವುದರಿಂದ ಉಳಿದ ಇನ್ನೊಂದು ಸೇತುವೆಯ ವಿಚಾರವೇನಾಯಿತೆಂಬುದನ್ನು ಅವರು ತಿಳಿಸಿಲ್ಲವಾದ್ದರಿಂದ ಅವರು ಹೇಳಿರತಕ್ಕ ಖರ್ಚು ದಾವಣಗೆರೆ—ಚನ್ನಗಿರಿ ರಸ್ತೆಗೆ ಅಲ್ಲವೇ ಎಂದು ಕೇಳುತ್ತಿದ್ದೇನೆ?

ಅಧ್ಯಕ್ಷರು.—ತಾವು ಕೇಳಿರತಕ್ಕ ರಸ್ತೆಯ ವಿಚಾರವನ್ನೇ ಈಗ ಅವರೂ ತಿಳಿಸಿದ್ದಾರೆ.

ಶ್ರೀ ಕೆ. ರುದ್ರಪ್ಪ.—ಈಗ ದಾವಣಗೆರೆಗೆ ಚನ್ನಗಿರಿಯಿಂದ ಎರಡು ಬಸ್ಸುಗಳು ಹೋಗುತ್ತಿದ್ದವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

*ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಕೆ. ರುದ್ರಪ್ಪ.—ಸಂತೇಬೆನ್ನೂರಿಂದ ದಾವಣಗೆರೆಗೆ ಹೋಗುತ್ತಿದ್ದವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಕೆ. ರುದ್ರಪ್ಪ.—ಈ ಎರಡು ಸೇತುವೆಗಳಲ್ಲದೆ ಮುಂದೆ ಇನ್ನೊಂದು ದೊಡ್ಡ ಸೇತುವೆ ಇದೆ. ಅದೂ ಒಡೆದು ಹೋಗಿದೆ. ಅದರ ಅಂದಾಜು ಎಷ್ಟೆಂಬುದನ್ನು ತಿಳಿಸುವಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ತಾವು ಒಂದು ಅಲಾಯಿದಾ ಪ್ರಶ್ನೆ ಕಳುಹಿಸಿ. ಅದಕ್ಕೆ ಉತ್ತರ ಒದಗಿಸಲಾಗುವುದು.

ಶ್ರೀ ಕೆ. ರುದ್ರಪ್ಪ.—ಮುಂದೆ ಇನ್ನೊಂದು ದೊಡ್ಡ ಹಳ್ಳವಿದೆ. ಅದು ಬಹಳ ಪ್ರಬಲವಾದದ್ದು. ಅದಕ್ಕೊಂದು ಅಂದಾಜನ್ನು ಬೇಗ ತಯಾರು ಮಾಡಿಸುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ತಾವು ಆ ಸಲಹೆಯನ್ನು ಕೊಡುತ್ತಿದ್ದೀರಿ. ಅದನ್ನು ಸರ್ಕಾರದವರು ಖಂಡಿತ ಪರಿಶೀಲನೆ ಮಾಡುತ್ತಾರೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈಗ ಸರ್ಕಾರದವರು ಉತ್ತರದಲ್ಲಿ ತಿಳಿಸಿರುವ ಹೀರೇಹಳ್ಳ ಮತ್ತು ಸೊಪ್ಪಿನ ಹಳ್ಳ ಇವುಗಳಲ್ಲದೆ ಮತ್ತೆ ಬೇರೆ ಯಾವ ಹಳ್ಳಗಳಾದರೂ ಇವೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ ಹೇಳಿರುವು ದೆಷ್ಟೋ ಅಷ್ಟೆ.

ಶ್ರೀ ಎ. ಆರ್. ಬದರಿನಾರಾಯಣ.—ಚನ್ನಗಿರಿಯಿಂದ ದೇವರಹಳ್ಳಿ-ಸಂತೆಬೆನ್ನೂರು ಮಾರ್ಗವಾಗಿ ದಾವಣಗೆರೆಗೆ ಹೋಗತಕ್ಕ ರಸ್ತೆ ಎಂದು ವಿಶದವಾಗಿ ಕೇಳಿರುವಾಗ ಈ ರಸ್ತೆಯಲ್ಲಿ ಸರ್ಕಾರದವರಿಗೆ ತಿಳಿಸಿರುವ ಎರಡು ಸೇತುವೆಗಳಲ್ಲದೆ ಬೇರೆ ಯಾವುದೂ ಇಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ನೋಟೀಸ್.

ಶ್ರೀ ಎ. ಆರ್. ಬದರಿನಾರಾಯಣ.—ಈ ಸರ್ಕಾರದವರು ಉತ್ತರದಲ್ಲಿ ತಿಳಿಸಿರುವ ಎರಡು ಸೇತುವೆಗಳಲ್ಲದೆ ಮತ್ತೆ ಯಾವುದರ ಅಂದಾಜೂ ಹೆಂಡಿಂಗ್ ಇಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವಿವರಗಳೆಲ್ಲಾ ಇಲ್ಲ.

ಶ್ರೀ ಕೆ. ರುದ್ರಪ್ಪ.—ಚನ್ನಗಿರಿ, ದೇವನಹಳ್ಳಿ, ಸಂತೇಬೆನ್ನೂರು ಮತ್ತು ದಾವಣಗೆರೆ ರಸ್ತೆಗಳನ್ನು ಯಾವಾಗ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ತೆಗೆದು ಕೊಳ್ಳಲಾಯಿತು ಎಂದು ಕೇಳಿರುವುದಕ್ಕೆ 1953 ರಲ್ಲಿ ಎಂದು ಹೇಳಿದ್ದೀರಿ. ಅದೇ ರೀತಿ ಈ ರಸ್ತೆಗಳಲ್ಲಿ ಯಾವ ಯಾವ ಸ್ಥಳದಲ್ಲಿ ಸೇತುವೆ, ಹೈ ಲೆವಲ್ ಕಾಸ್‌ವೆಗಳನ್ನು ಕಟ್ಟಬೇಕು ಮತ್ತು ಅದಕ್ಕೆ ಆಗತಕ್ಕ ಪೊಬಲಗೇನು ಎಂದು ಕೇಳಿದ್ದೇನೆ. ಅದಕ್ಕೆ ಉತ್ತರವಾಗಿ ಎರಡು ಸ್ಥಳಗಳಲ್ಲಿ ಮಾತ್ರ ಸೇತುವೆ ಆಗಬೇಕೆಂದು ಹೇಳಿದ್ದೀರಿ. ಅದೇರೀತಿ ಇನ್ನು ಅನೇಕ ಕಡೆ ಸೇತುವೆ ಆಗಬೇಕು. ಅದಕ್ಕೆ ಅಂದಾಜು ತಯಾರು ಮಾಡಿಸುತ್ತೀರಾ?